ಫ್ಯಾಕ್ಸ್ / Fax : 080-25586321
ಈಮೇಲ್ / E-mail : ho@kspcb.gov.in
ವೆಬ್‌ಸೈಟ್ / Website : http://kspcb.gov.in

☎ 25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರಭವನ", 1 ರಿಂದ 5ನೇ ಮಹಡಿಗಳು, ನಂ.49, ಚರ್ಚ್‌ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂ:ಮಾನಿಮ/14/ಹ.ವಿ/2018-19 3295 ದಿನಾಂಕ: 25 MAR 2019

**ಜ್ಞಾಪನ ಪತ್ರ**

ವಿಷಯ: ಮಂಡಳಿಯ ಸಮ್ಮತಿ ಶುಲ್ಕವನ್ನು ಐ.ಡಿ.ಬಿ.ಐ ಬ್ಯಾಂಕ್ ಖಾತೆಗೆ ಮಾತ್ರವೇ ಜಮೆ ಮಾಡುವ ಬಗ್ಗೆ

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಮಂಡಳಿಯಿಂದ ಸಂಗ್ರಹಿಸಲಾಗುತ್ತಿರುವ ಸಮ್ಮತಿ ಶುಲ್ಕವನ್ನು XGN payment gateway ಮೂಲಕ ಆನ್‌ಲೈನ್‌ನಲ್ಲಿ ಮಂಡಳಿಯ ಐ.ಡಿ.ಬಿ.ಐ ಬ್ಯಾಂಕ್ ಖಾತೆಗೆ ಹಾಗೂ ನೆಫ್ಟ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ಮಾಡುವ ಜಮೆಯನ್ನು ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ನಿರ್ವಹಣೆಯಾಗುತ್ತಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತಿದೆ. ಒಂದೇ ಉದ್ದೇಶಕ್ಕೆ ಈ ರೀತಿ ಎರಡು ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ನಿಯಮಗಳಡಿ ಅವಕಾಶವಿರುವುದಿಲ್ಲ. ಅಲ್ಲದೆ ಹೀಗೆ ಅಗತ್ಯಕ್ಕಿಂತ ಹೆಚ್ಚು ಸಂಖ್ಯೆಯ ಬ್ಯಾಂಕ್ ಖಾತೆಗಳನ್ನು ನಿರ್ವಹಿಸಬಾರದೆಂದು ಮಂಡಳಿಯ ಮಾನ್ಯ ಅಧ್ಯಕ್ಷರು ಸೂಚಿಸಿರುವುದರಿಂದ ಸಮ್ಮತಿ ಶುಲ್ಕದ ಜಮೆಗಾಗಿ ಈವರೆಗೆ ನಿರ್ವಹಿಸುತ್ತಿದ್ದ ಕಾರ್ಪೊರೇಷನ್ ಬ್ಯಾಂಕ್ ಖಾತೆ ಸಂಖ್ಯೆ:510101005677504ನ್ನು ಮುಕ್ತಾಯಗೊಳಿಸಲಾಗುತ್ತಿದೆ. ಆದ್ದರಿಂದ ಸಮ್ಮತಿ ಶುಲ್ಕವನ್ನು XGN payment gateway ಅಲ್ಲದೆ, ನೆಫ್ಟ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ಮಾಡುವ ಜಮೆಯನ್ನು ಕೂಡ ಈ ಕೆಳಕಂಡ ಐ.ಡಿ.ಬಿ.ಐ ಬ್ಯಾಂಕ್ ಖಾತೆಗೆ ಮಾತ್ರವೇ ಜಮೆ ಮಾಡಿಸಲು ಕಟ್ಟುನಿಟ್ಟಾಗಿ ಸೂಚಿಸಿದೆ.

| ಕ್ರ. ಸಂ | ಬ್ಯಾಂಕ್ ಹಾಗೂ ಶಾಖೆಯ ಹೆಸರು | ಖಾತೆ ಸಂಖ್ಯೆ | ಐ.ಎಫ್.ಎಸ್.ಸಿ.ಕೋಡ್/ ಎಂ.ಐ.ಸಿ.ಆರ್ ಕೋಡ್ | ಯೋಜನೆ |
|---|---|---|---|---|
| 1 | ಐ.ಡಿ.ಬಿ.ಐ ಬ್ಯಾಂಕ್, ಡಾಲರ್ಸ್ ಕಾಲೊನಿ ಶಾಖೆ, ಬೆಂಗಳೂರು | ಉ.ಖಾ.ಸಂ: 0869104000081333 | ಐ.ಎಫ್.ಎಸ್.ಸಿ.ಕೋಡ್: IBKL0000869 ಎಂ.ಐ.ಸಿ.ಆರ್ ಕೋಡ್: 560259016 | ಸಮ್ಮತಿ ಶುಲ್ಕ |

ಮಂಡಳಿಯ ಎಲ್ಲಾ ಅಧೀನ ಕಛೇರಿಗಳು ದಿನಾಂಕ:01-04-2019ರಿಂದ ಮೇಲಿನ ಬ್ಯಾಂಕ್ ಖಾತೆಗೆ ಮಾತ್ರವೇ XGN payment gateway, ನೆಫ್ಟ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ಸಮ್ಮತಿ ಶುಲ್ಕವನ್ನು ಜಮೆ ಮಾಡತಕ್ಕದ್ದು.

ಸದಸ್ಯ ಕಾರ್ಯದರ್ಶಿ

ಪ್ರತಿಗಳು:
1. ಮಂಡಳಿಯ ಎಲ್ಲಾ ಪ್ರಾದೇಶಿಕ /ವಿಭಾಗೀಯ ಕಛೇರಿಗಳ ಮುಖ್ಯಸ್ಥರಿಗೆ
2. ಮಂಡಳಿಯ ಕೇಂದ್ರ ಕಛೇರಿಯ ಎಲ್ಲಾ ಶಾಖೆಗಳ ಮುಖ್ಯಸ್ಥರಿಗೆ — CEO-1
3. ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಗಳ ಆಪ್ತ ಶಾಖೆಗೆ